ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಪತ್ತೆಹಚ್ಚಲಾದ ಅಕ್ರಮ ಗಣಿಗಾರಿಕೆಗಳು

1581 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕಳೆದ 2 ವರ್ಷಗಳಿಂದ ಗಣಿಗಾರಿಕೆಯನ್ನು ನಡೆಸುತ್ತಿರುವರ ಸಂಖ್ಯೆ ಎಷ್ಟು? ಇದರಲ್ಲಿ ಎಷ್ಟು ಜನರ ಪರಿವಾನಿಗೆ ನವೀಕರಿಸಲಾಗಿದೆ?*

ಆ) *ರಾಜ್ಯದಲ್ಲಿ 2 ವರ್ಷಗಳಲ್ಲಿ ಒಟ್ಟು ಎಷ್ಟು ಅಕ್ರಮ ಗಣಿಗಾರಿಕೆಯನ್ನು ಪತ್ತೆ ಹಚ್ಚಲಾಗಿದೆ? ವಸೂಲಾದ ದಂಡ ಎಷ್ಟು? ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)*

ಶ್ರೀ ಎಸ್. ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) 1. ಗಣಿಕಾರಿಕೆ ನಡೆಸುತ್ತಿರುವವರ ಸಂಖ್ಯೆ 7,726

2. ಪರವಾನಿಗೆ ನವೀಕರಿಸಲಾಗಿರುವ ಸಂಖ್ಯೆ 345

ಆ) 1. ಪತ್ತೆ ಹಚ್ಚಲಾಗಿರುವ ಅಕ್ರಮ ಗಣಿಗಾರಿಕೆಗಳ ಸಂಖ್ಯೆ 1036

2. ವಸೂಲಾದ ದಂಡ 84.84 ಲಕ್ಷ ರೂ.ಗಳು

3. ಕಾನೂನು ರೀತ್ಯ 5 ಪಟ್ಟು ದಂಡ ವಿಧಿಸುವುದು, ಪೋಲೀಸರಿಗೆ ದೂರು ದಾಖಲಿಸುವುದು, ಅನಿರೀಕ್ಷಿತ ತಪಾಸಣೆ ಮಾಡುವುದು ಹಾಗೂ ತಪಾಸಣಾ ಸ್ಕ್ವಾಡುಗಳನ್ನು ನಿಯೋಜಿಸುವ ಮೂಲಕ, ಸರ್ಕಾರವು ಅಕ್ರಮ ಗಣಿಗಾರಿಕೆ ಯನ್ನು ತಡೆಗಟ್ಟುವಲ್ಲಿ ಕ್ರಮ ಕೈಗೊಳ್ಳುತ್ತಿದೆ. ಹಾಗೂ ಈ ನಿಟ್ಟಿನಲ್ಲಿ 5 ಉಪವಿಭಾಗೀಯ ಕಛೇರಿಗಳನ್ನು ಸಹ ತೆಗೆಯಲಾಗಿದೆ.

ಮಂಗಳೂರು ತೈಲ ಶುದ್ಧೀಕರಣ ಕೇಂದ್ರದ ಸ್ಥಾಪನೆಯಿಂದ ಜಮೀನು ಕಳೆದುಕೊಂಡವರಿಗೆ ಪುನರ್‌ವಸತಿ

1582 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರು ತೈಲ ಶುದ್ಧೀಕರಣ ಕೇಂದ್ರದ ಸ್ಥಾಪನೆಗಾಗಿ ಜಾಗ ಕಳೆದುಕೊಂಡು ಇನ್ನು ಎಷ್ಟು ಜನರಿಗೆ ಉದ್ಯೋಗ ನೀಡಲು ಬಾಕಿ ಇದೆ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?*

ಆ) *ಪುನರ್‌ವಸತಿಗಾಗಿ ಎಷ್ಟು ಜನರಿಗೆ ಮನೆ ನಿರ್ಮಾಣ ಮಾಡಲಾಗಿದೆ. ಈ ಮನೆಗಳು ಕಳಪೆ ದರ್ಜೆಯಲ್ಲಿ ನಿರ್ಮಾಣ ಮಾಡಿರುವುದು ನಿಜವೇ?*

ಇ) *ಹಾಗಿದ್ದಲ್ಲಿ ಸಂಬಂಧಿಸಿದವರ ಮೇಲೆ ಕೈಗೊಂಡ ಕ್ರಮವೇನು?*

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು) :

ಅ) *ಮಂಗಳೂರು ತೈಲ ಶುದ್ಧೀಕರಣ ಕೇಂದ್ರದ ಸ್ಥಾಪನೆಗಾಗಿ ಭೂ ಸ್ವಾಧೀನತೆಯಿಂದ ಜಮೀನು ಕಳೆದುಕೊಂಡ ನಿರ್ವಸಿತರ ಸಂಖ್ಯೆ : 497 ಇದರಲ್ಲಿ ಇಲ್ಲಿಯವರೆಗೆ 123 ಜನರಿಗೆ ನೇರ ಉದ್ಯೋಗವನ್ನು ಎಂ.ಆರ್.ಪಿ.ಎಲ್. ಕಂಪನಿಯವರು ಕಲ್ಪಿಸಿದ್ದಾರೆ. ಉಳಿದ 374 ಜನರಿಗೆ ಉದ್ಯೋಗ ಕೊಡಬೇಕಾಗಿರುತ್ತದೆ. ಈ ಪೈಕಿ 298 ಕುಟುಂಬದವರಿಗೆ ಸರ್ಕಾರದ ಆದೇಶದಂತೆ ರೂ.1,50,000-00 ಗಳ ನಗದು ಪರಿಹಾರವನ್ನು ಪಾವತಿಸಿದೆ. ಉಳಿದ 76 ಕುಟುಂಬಗಳು ನಗದು ಪರಿಹಾರ ಧನವನ್ನು ಸ್ವೀಕರಿಸಬೇಕಾಗಿದೆ.*

ಆ) *ಪುನರ್ ವಸತಿಗಾಗಿ ಮನೆಗಳನ್ನು ನಿರ್ಮಾಣ ಮಾಡಲಾಗಿರುವುದಿಲ್ಲ. ಆದರೆ ಪುನರ್ ವಸತಿಗೆ ನಿವೇಶನವನ್ನು ಮಾತ್ರ ನೀಡಲಾಗಿದೆ.*

ಇ) *ಪ್ರಶ್ನೆ ಉದ್ಭವಿಸುವುದಿಲ್ಲ.*

ದ.ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳು

1583 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರಾರಂಭಿಸಿದ ವಸತಿ ಶಾಲೆಗಳೆಷ್ಟು?*

ಆ) *ರಾಜ್ಯದಲ್ಲಿ ಈ ಹಣಕಾಸು ವರ್ಷದಲ್ಲಿ ಎಷ್ಟು ವಸತಿಶಾಲೆಗಳನ್ನು ಪ್ರಾರಂಭಿಸಲಾಗುವುದು? (ಜಿಲ್ಲಾವಾರು ವಿವರ ನೀಡುವುದು).*

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಮಚ್ಚಿನ ಗ್ರಾಮಕ್ಕೆ ಒಂದು ವಸತಿಶಾಲೆಯನ್ನು ಮಂಜೂರು ಮಾಡಲಾಗಿದೆ.

ಆ) ಈ ಹಣಕಾಸು ವರ್ಷದಲ್ಲಿ ಹೊಸದಾಗಿ ವಸತಿ ಶಾಲೆಗಳನ್ನು ಪ್ರಾರಂಭಿಸುವ ಉದ್ದೇಶವಿರುವುದಿಲ್ಲ.

ರಾಜ್ಯದಲ್ಲಿ ಸಣ್ಣ ಕೈಗಾರಿಕೆ ಸಬ್ಸಿಡಿ

1584 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?